# ಮಕ್ಕಳ ದಿಟ್ಟ ಹೆಜ್ಜೆ...



**ಹರ್ಷ ರಾಮ್**

ಅನಿವಾಸಿ ಭಾರತೀಯ ಹರ್ಷ ರಾಮ್ ನಿರ್ಮಾಣದ ***ಬೆಟ್ಟದ ಪುರದ ದಿಟ್ಟ ಮಕ್ಕಳು*** ಚಿತ್ರ ಇದೇ ವಾರ ರಾಜ್ಯಾದ್ಯಂತ ತೆರೆ ಕಾಣುತ್ತಿದೆ. ಅಷ್ಟೇ ಅಲ್ಲ, ಇದೇ ಚಿತ್ರ ಅಕ್ಟೋಬರ್ ಎರಡರಂದು ಅಮೆರಿಕದ ಸಿಯಾಟಲ್ ವಾಷಿಂಗ್ಟನ್‌ನಲ್ಲಿ ನಡೆಯಲಿರುವ ದಕ್ಷಿಣ ಏಷ್ಯಾ ಚಲನ ಚಿತ್ರೋತ್ಸವದಲ್ಲಿ ಪ್ರದರ್ಶನಗೊಳ್ಳಲಿದೆ.

ಅಕ್ರಮ ಗಣಿಗಾರಿಕೆ ವಿರುದ್ಧ ದಿಟ್ಟ ಮಕ್ಕಳು ನಡೆಸುವ ಹೋರಾಟದ ಕತೆಯುಳ್ಳ ಇದು, ನಾ.ಡಿಸೋಜ ಅವರ ***ಬೆಟ್ಟದ ಪುರದ ದಿಟ್ಟ ಮಕ್ಕಳು*** ಕಾದಂಬರಿ ಆಧಾರಿತ ಚಿತ್ರ. ನಾ.ಡಿ.ಯವರ ಮುಳುಗಡೆ ಕಾದಂಬರಿ ನಾಲ್ಕು ವರ್ಷದ ಹಿಂದೆ ದ್ವೀಪವಾಗಿ ಬದಲಾಗಿತ್ತು. ರಾಷ್ಟ್ರ ಪ್ರಶಸ್ತಿ ಗಳಿಸಿತ್ತು. ಈಗ ಅವರ ಮತ್ತೊಂದು ಕಾದಂಬರಿಯನ್ನು ಹರ್ಷರಾಮ್ ಸಿನಿಮಾ ಮಾಡಿದ್ದಾರೆ. ಅದು ಈಗಾಗಲೇ ದಕ್ಷಿಣ ಏಷ್ಯಾ ಚಿತ್ರೋತ್ಸವಕ್ಕೆ ಆಯ್ಕೆಯಾಗಿದೆ. ಮುಂದೆ ಏನಾಗಲಿದೆ ಎಂದು ಕಾದುನೋಡಬೇಕಿದೆ.

ರಾಮನಗರ ಸುತ್ತಮುತ್ತ ಚಿತ್ರೀಕರಣ ಮಾಡಲಾಗಿದೆ. ನಿರ್ಮಾಪಕ ಹರ್ಷ ಅವರು ಮಕ್ಕಳನ್ನು ಗಣಿಗಾರಿಕೆ ವಿರುದ್ಧ ಹೋರಾಟ ಮಾಡುವಂತೆ ಪ್ರೋತ್ಸಾಹಿಸುವ ಶಿಕ್ಷಕನ ಪಾತ್ರ ಮಾಡಿದ್ದಾರೆ. ಮಾಸ್ಟರ್ ಶಶಾಂಕ್, ವಿನೋದ್, ಅಮೃತಾ, ಸಮುದ್, ಮಂದಾರ ಮೊದಲಾದ ಪುಟಾಣಿಗಳು ದಿಟ್ಟ ಮಕ್ಕಳ ಪಾತ್ರ ಮಾಡಿದ್ದಾರೆ. ಉಳಿದಂತೆ ಶ್ರೀನಿವಾಸ ಮೂರ್ತಿ, ಪದ್ಮಾ ವಾಸಂತಿ ಮೊದಲಾದವರಿದ್ದಾರೆ. ಹಾಸ್ಯಕ್ಕೆ ಬ್ಯಾಂಕ್ ಜನಾರ್ದನ್, ಕರಿಬಸವಯ್ಯ ಹಾಗೂ ಜೋ ಸೈಮನ್ ಇದ್ದಾರೆ. ಖಳ ಪಾತ್ರವನ್ನು ಶೋಭರಾಜ್ ನಿರ್ವಹಿಸುತ್ತಿದ್ದಾರೆ.

ಚಿತ್ರದ ನಿರ್ದೇಶನದ ಜವಾಬ್ದಾರಿಯನ್ನು 'ಮಕ್ಕಳ ಚಿತ್ರಗಳ ಸರದಾರ' ಕೂಡ್ಲು ರಾಮಕೃಷ್ಣ ನಿರ್ವಹಿಸಿದ್ದಾರೆ.